ಶಿಕ್ಷಕ ಎಂದರೆ ಏನರ್ಥ? ಕಲಿಸುವಾತನೆ ಗುರು ಎನ್ನುತ್ತಾರೆ ನಮ್ಮ ಹಿರಿಯರು. ಪ್ರಸ್ತುತ ಶಿಕ್ಷಣ ವ್ಯವಸ್ಥೆ ಶಾಲೆಗಳಲ್ಲಿ ಪಾಠ ಹೇಳುವವರನ್ನು 'ಶಿಕ್ಷಕ' ಎನ್ನುತ್ತದೆ. ಆದರೆ, ನಿಜವಾದ ಅರ್ಥದಲ್ಲಿ ಶಿಕ್ಷಕನ ಕೆಲಸ ಶಿಕ್ಷಣಾರ್ಥಿಯ ಮನಸ್ಸನ್ನು ಜಾಗೃತಗೊಳಿಸುವುದು. ವಿದ್ಯಾರ್ಥಿಗಳ ಮೂಲಕ ಸಮಾಜವನ್ನು ಎಚ್ಚರಗೊಳಿಸುವ ಕೆಲಸವನ್ನು ಶಿಕ್ಷಕನೊಬ್ಬ ನಿರಂತರವಾಗಿ ಮಾಡುತ್ತಿರುತ್ತಾನೆ. ಅಂಕಗಳಿಕೆಯ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಕೆಲಸವನ್ನಷ್ಟೇ ಮಾಡದೆ, ಎಳೆಯರ ಮನೋವಿಕಾಸದ ಸಾಧ್ಯತೆಗಳನ್ನು ಶಿಕ್ಷಕ ರೂಪಿಸುತ್ತಾನೆ. ಅಂಥ ಇಬ್ಬರು ಶಿಕ್ಷಕರ ವೃತ್ತಿ ಅನುಭವಗಳು ಈ ಸಂಚಿಕೆಯ 'ಸುಧಾ' ವಿಶೇಷ. 'ಶಿಕ್ಷಕರ ದಿನಾಚರಣೆ' ಸಂದರ್ಭದಲ್ಲಿ ಪ್ರಕಟಗೊಂಡಿರುವ ಈ ಅನುಭವ ಕಥನಗಳು ವೈಯಕ್ತಿಕ ಕಥನಗಳಾಗಿ ಉಳಿಯದೆ, ಮಾದರಿ ಶಿಕ್ಷಕನೊಬ್ಬನ ವ್ಯಕ್ತಿತ್ವದ ಚಿತ್ರಣವೂ ಆಗಿವೆ. ಕೊರೊನಾ ಕಾಲಘಟ್ಟದಲ್ಲಿ ಶಿಕ್ಷಣ ವ್ಯವಸ್ಥೆ ಸಂಕ್ರಮಣ ಸ್ಥಿತಿಯಲ್ಲಿದೆ. ಒಂದೂವರೆ ವರ್ಷದಿಂದ ಶಾಲೆ ಮತ್ತು ಮಕ್ಕಳ ನಡುವೆ ಸಂಪರ್ಕ ತಪ್ಪಿದೆ. ಪರಿಸ್ಥಿತಿ ಸುಧಾರಿಸುತ್ತಿರುವ ಆಶಾಭಾವ ಕಾಣಿಸುತ್ತಿರುವ ಸಂದರ್ಭದಲ್ಲಿ, ಈ ಅನುಭವ ಕಥನಗಳು ಶಿಕ್ಷಕವೃಂದದಲ್ಲಿ ಉತ್ಸಾಹ ಉಂಟು ಮಾಡುವಂತಿವೆ ಹಾಗೂ ಶಿಕ್ಷಕರ ಬಗ್ಗೆ ಸಮಾಜದಲ್ಲಿ ಕೃತಜ್ಞತಾಭಾವ ಮೂಡಿಸುವಂತಿವೆ.

